ಮಂಗಳೂರು-ಹಾಸನ ರೈಲು ಮಾರ್ಗ ಪುನರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 167(182)

ಸದಸ್ಯರ ಹೆಸರು ಶ್ರೀ ವಿಜಯಕುಮಾರ ಶೆಟ್ಟಿ(ಸುರತ್‌ಕಲ್)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ, ಒಳಾಡಳಿತ ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

ಪ್ರಶ್ನೆ

ಅ) ಗೇಜ್ ಪರಿವರ್ತನೆಗಾಗಿ ಮುಚ್ಚಿರುವ ಹಾಸನ-ಮಂಗಳೂರು ರೈಲು ಮಾರ್ಗದ ಪುನರಾರಂಭಕ್ಕೆ ಕೇಂದ್ರ ಸರ್ಕಾರದ ಮೇಲೆ ಯಾವ ಒತ್ತಡ ತಂದಿದೆ?

ಆ) ರಾಜ್ಯದ ರೈಲು ಮಾರ್ಗ ನಿರ್ಮಾಣಕ್ಕಾಗಿ ವಿಶೇಷ ನಿಗಮ ರಚಿಸಿ ಮಾರ್ಗ ನಿರ್ಮಾಣ ಕಾರ್ಯದ ಹೊಣೆಗಾರಿಕೆಯನ್ನು ನೀಡಲಾಗುವುದೇ?

ಇ) ಹಾಸನ-ಮಂಗಳೂರು ರೈಲು ಮಾರ್ಗದಲ್ಲಿ ಗೇಜ್ ಪರಿವರ್ತಿಸಿ ಶೀಘ್ರ ಕಾರ್ಯಾರಂಭಕ್ಕೆ ಸರ್ಕಾರ ಸರ್ವ ಪಕ್ಷ ನಿಯೋಗವನ್ನು ಕೊಂಡೊಯ್ಯುವ ಕುರಿತು ಚಿಂತಿಸಿದೆಯೇ?

ಉತ್ತರ

ಅ) ಹಾಸನ-ಮಂಗಳೂರು ಗೇಜ್ ಪರಿವರ್ತನ ಯೋಜನೆಯನ್ನು ಜಾರಿಗೊಳಿಸಲು ''ಹಾಸನ-ಮಂಗಳೂರು ರೈಲು ಅಭಿವೃದ್ಧಿ ಕಂಪೆನಿ' ಯೆಂಬ ಒಂದು ವಿಶೇಷ ಉದ್ದೇಶ ಸಂಸ್ಥೆಯನ್ನು ಸ್ಥಾಪಿಸಲಾಗಿದೆ ಈ ಪ್ರಸ್ತಾವನೆಗೆ ಈಗಾಗಲೇ ಕರ್ನಾಟಕ ಸರ್ಕಾರದ ಅನುಮೋದನೆ ದೊರೆತಿದ್ದು ರೈಲ್ವೆ ಮಂತ್ರಾಲಯ ಭಾರತ ಸರ್ಕಾರದ ಸಮ್ಮತಿ ಪಡೆಯುವ ಅಂತಿಮ ಹಂತದಲ್ಲಿದೆ

ಆ) ಹೌದು

ಇ) ಇಲ್ಲ

ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 168(501)